ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.: 106/2016

ಪಿ. ಡಬ್ಲ್ಯು: 13
ಸಿ. ಡಬ್ಲ್ಯು: 14

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರದೀಪ್.ಎನ್.ಎಲ್ |
| ತಂದೆ/ಪತಿಯ ಹೆಸರು | : | ಲೋಕೇಶ್.ಎನ್.ವಿ |
| ವಯಸ್ಸು | : | 36 ವರ್ಷ |
| ವೃತ್ತಿ | : | ಪೋಲೀಸ್ ಪೇದೆ, ಕೆ.ಆರ್.ಪೇಟ್ ಟೌನ್ ಪೋಲೀಸ್ ಠಾಣೆ |
| ವಾಸ | : | ಕೆ.ಆರ್.ಪೇಟ್ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 04.09.2023

ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ

ನಾನು 2012 ರಿಂದ 2019 ವೆರೆಗೆ ಪಾಂಡವಪುರ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನು.

ಪಾಂಡವಪುರ ಪೋಲೀಸ್ ಠಾಣೆ ಮೊ.ಸಂ.378/15 ರ ಕೇಸಿಗೆ ಸಂಬಂಧಿಸಿದ ಆರೋಪಿ ಮತ್ತು ಮಾಲುಪತ್ತೆ ತಂಡದಲ್ಲಿದ್ದು, ದಿ: 30.11.2015 ರಂದು ಮೇಲಿನ ಪ್ರಕರಣದ ತನಿಖಾಧಿಕಾರಿಯಾದ ಚಾಸಾ.18 ರವರು ಠಾಣೆಯಲ್ಲಿದ್ದಾಗ ನನ್ನನ್ನು ಕರೆದು ಜೊತೆಯಲ್ಲಿ ಸಿ.ಪಿ.ಸಿ.393 ರೇವಣ್ಣ, ಸಿ.ಪಿ.ಸಿ628 ಕೃಷ್ಣೇಗೌಡರವರನ್ನು ಕರೆದು ಮೇಲಿನ ಪ್ರಕರಣದ ಆರೋಪಿಯಾದ ಜಗದೀಶ್ ಅಲಿಯಾಸ್ ಜಗ್ಗ, ಕೃಷ್ಣ ಕುಮಾರ ಅಲಿಯಾಸ್ ಗಜ, ವಿನೋದ್ ಅಲಿಯಾಸ್ ವಿನಿ, ಅಯ್ಯಪ್ಪ ಅಲಿಯಾಸ್ ಲವ ರವರುಗಳು ನಾಗಮಂಗಲ ಕಡೆಯಿಂದ ಮಾರುತಿ ಸಿಫ್ಟ್ ಡಿಸೈರ್ ಕಾರ್ ಕೆಎ-05-ಎಇ-6793 ಕಾರಿನಲ್ಲಿ ಬರುತ್ತಿದ್ದಾರೆ ಎಂಬ ಮಾಹಿತಿ ಇದೆ ಅಲ್ಲಿಗೆ ಹೋಗೋಣವೆಂದು ಕೆ.ಎಸ್.ಆರ್.ಟಿ.ಸಿ ಡಿಪೋ ಬಳಿ ನಮ್ಮನ್ನು ಕರೆದುಕೊಂಡು ಜೊತೆಯಲ್ಲಿ ಕಾಯುತ್ತಾ ನಿಂತಿದ್ದಾಗ ಮಧ್ಯಾಹ್ನ 12.00 ಸಮಯದಲ್ಲಿ ಮಾರುತಿ ಸಿಫ್ಟ್ ಡಿಸೈರ್ ಕಾರ್ ಬಂದಿತ್ತು. ಕಾರನ್ನು ತಪಾಸಣೆ ಮಾಡಿದಾಗ ಅದರಲ್ಲಿ ಮೇಲೆ ತಿಳಿಸಿದ 4 ಜನ ಆರೋಪಿಗಳು ಇದ್ದರು. ನಂತರ ಆರೋಪಿತರು ಹಾಗೂ ಕಾರನ್ನು ಚಾಸಾ.18 ರವರು ತಮ್ಮ ವಶಕ್ಕೆ ಪಡೆದು ನಂತರ ಠಾಣೆಗೆ ಕರೆದುಕೊಂಡು ಹೋದರು.

ನಂತರ ಪೊೋಲೀಸ್ ಠಾಣೆಯಲ್ಲಿ ಮಧ್ಯಾಹ್ನ 02.10-02.45 ವರೆಗೆ ಪಂಚರ ಸಮಕ್ಷಮ ಕಾರನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.

ಚಾಸಾ.18 ರವರ ಆದೇಶದ ಮೇರೆಗೆ ತನಿಖಾ ಕಾಲದಲ್ಲಿ ಜೊತೆಯಲ್ಲಿದ್ದು ತನಿಖೆಗೆ ಸಹಕರಿಸಿರುತ್ತೇನೆ.

ದಿಃ 10.01.2016 ರಂದು ಅರಕೆರೆ ಪೋಲೀಸ್ ಠಾಣಾ ಪ್ರಕರಣ ಃ 130/2015 ರ ಪ್ರಕರಣಕ್ಕೆ ಸಂಬಂಧಿಸಿದಂತೆ ಮು.ಮಾಲು ಮತ್ತು ಕಡತ ಹಾಗೂ ಸಿಲಿಂಡರ್ ದಾಖಲೆಗಳನ್ನು ಅರಕರೆ ಪೋಲಿಸ್ ಠಾಣಾ ಪಿ.ಎಸ್.ಐ ರವರಿಗೆ ನೀಡಿರುತ್ತೇನೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ವಿನೋದ್ ರವರನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರು ಬಂದಿದ್ದ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ.8 ರ ಭಾವಚಿತ್ರದಲ್ಲಿರುವ ಕಾರನ್ನು ನೋಡಿ ಗುರುತಿಸಿರುತ್ತಾರೆ.

ಅರಕರೆ ಪಿ.ಎಸ್.ಐ ರವರ ಸಮಕ್ಷಮ ಹಾಜರುಪಡಿಸಿರುವ ಸಿಲಿಂಡರ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ.5 ರ ಭಾವಚಿತ್ರದಲ್ಲಿರುವ ಸಿಲಿಂಡರ್ ನೋಡಿ ಗುರುತಿಸಿರುತ್ತಾರೆ. ನಾನು ತನಿಖಾಧಿಕಾರಿಯವರಿಗೆ ಮೇಲೆ ತಿಳಿಸಿದ ವಿಚಾರದ ಸಂಬಂಧ ಹೇಳಿಕೆ ನೀಡಿದ್ದೇನೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಚಾಸಾ.18 ನನ್ನ ಹಿರಿಯ ಅಧಿಕಾರಿ ಎಂದರೆ ಸರಿ. ನಾನು ಪಾಂಡವಪುರ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ಮಾಡುವಾಗ ಚಾಸಾ.18 ರವರು ನನಗೆ ಯಾವ ಜಾಗಕ್ಕೆ ಹೋಗಬೇಕೆಂದು ತಿಳಿಸಿರಲಿಲ್ಲ. ಚಾಸಾ.18 ರವರ ಜೊತೆ ನಾವು ಠಾಣೆಯಿಂದ ಹೋದ ಸಂದರ್ಭದಲ್ಲಿ ಎಲ್ಲಿಗೆ ಎಷ್ಟು ಜನ ಹೋಗುತ್ತಿದ್ದೇವೆ ಎನ್ನುವ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಮಾಡಲಾಗಿದೆ. ಕಾರಿನ ಸಂಗಡ ಏನೆಲ್ಲಾ ವಸ್ತುಗಳನ್ನು ವಶಪಡಿಸಿಕೊಂಡಿದ್ದೇವು ಎನ್ನುವ ಬಗ್ಗೆ ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ.

ನಾವು ಪಾಂಡವಪುರ ಪೋಲೀಸ್ ಠಾಣೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾತ್ರ ಆರೋಪಿಯನ್ನು ಪತ್ತೆ ಮಾಡಲು ಹೋಗಿದ್ದೇವು ಈ ಪ್ರಕರಣದ ಸಲುವಾಗಿ ಹೋಗಿರಲಿಲ್ಲ ಎಂದರೆ ಸರಿ.

ನಾನು ಹೇಳಿಕೆಯನ್ನು ಚಾಸಾ.18 ರವರ ಸಮಕ್ಷಮ ನೀಡಿದ್ದೇನು. ನನ್ನ ಹೇಳಿಕೆಯಲ್ಲಿ ಗ್ಯಾಸ್ ಸಿಲಿಂಡರ್ ವಶಪಡಿಸಿಕೊಂಡಿದ್ದ ಬಗ್ಗೆ ಮತ್ತು ಅದನ್ನು ತಂದು ಠಾಣಾ ಪಿ.ಎಸ್.ಐ

ರವರಿಗೆ ನೀಡಿದ್ದ ಬಗ್ಗೆ ತಿಳಿಸಿಲ್ಲ ಎಂದರೆ ಸರಿ. ನನ್ನ ಹಿರಿಯ ಅಧಿಕಾರಿಯವರ ಮಾತು ಕೇಳಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.